# ಕರ್ನಾಟಕ ಸರ್ಕಾರ

ಸಂಖ್ಯೆ:ಸಕನಿ/ಸಿಬ್ಬಂದಿ-11/ಸಿಆರ್-68/2022-23

ಸಮಾಜ ಕಲ್ಯಾಣ ಆಯುಕ್ತರ ಕಛೇರಿ,
5 ನೇ ಮಹಡಿ, ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:07-01-2023

## ಅಧಿಕೃತ ಜ್ಞಾಪನ

ವಿಷಯ: ಸಮಾಜ ಕಲ್ಯಾಣ ಇಲಾಖೆಯಲ್ಲಿ ಎಸ್.ಎಸ್.ಎಲ್.ಸಿ ಉತ್ತೀರ್ಣರಾಗಿರುವ ಹಾಗೂ ಲಘು ವಾಹನ ಚಾಲನಾ ಪರವಾನರಿ ಹೊಂದಿರುವ ಹಿರಿಯ ವೇತನ ಶ್ರೇಣಿ ಹಾಗೂ ಕಿರಿಯ ವೇತನ ಶ್ರೇಣಿ ಹೊಂದಿರುವ ಗ್ರೂಪ್ ಡಿ ವೃಂದದ (ಅಡುಗೆಯವರು, ಅಡುಗೆ ಸಹಾಯಕರು, ಜವಾನರು, ಕಾವಲುಗಾರರು) ನೌಕರರ ಸಂಯೋಜಿತ ತಾತ್ಕಾಲಿಕ ಜೇಷ್ಟತಾ ಪಟ್ಟಿಯನ್ನು ದಿನಾಂಕ:31-12-2022 ಕ್ಕೆ ಅಂತ್ಯಗೊಂಡಂತೆ ದಿನಾಂಕ:01-01-2023 ರಲ್ಲಿದ್ದಂತೆ ಪ್ರಕಟಿಸುವ ಕುರಿತು.

ಉಲ್ಲೇಖ
1. ಕರ್ನಾಟಕ ಸರ್ಕಾರಿ ನೌಕರರ (ಜೇಷ್ಟತಾ) ನಿಯಮಗಳು, 1957.
2. ಸರ್ಕಾರದ ಅಧಿಕೃತ ಜ್ಞಾಪನ ಸಂ: ಡಿಪಿಎಆರ್ 48 ಎಸ್ ಎಸ್ಆರ್ 75 ದಿ: 05-07-1976.
3. ಸರ್ಕಾರದ ಅಧಿಕೃತ ಜ್ಞಾಪನ ಸಂ:ಸಿಆಸುಇ 43 ಸೇನೆನಿ 87 ದಿನಾಂಕ: 14-12-1987.
4. ಸರ್ಕಾರದ ಅಧಿಕೃತ ಜ್ಞಾಪನ ಸಂ:ಸಿಆಸುಇ 07 ಸೇನೆನಿ 96 ದಿನಾಂಕ: 16-07-1996
5. ಸರ್ಕಾರದ ಅಧಿಕೃತ ಜ್ಞಾಪನ ಸಂ:ಸಿಆಸುಇ 32 ಸೇನೆನಿ 2003 ದಿನಾಂಕ: 10-06-2003.
6. ಸರ್ಕಾರದ ಸುತ್ತೋಲೆ ಸಂ:ಸಿಆಸುಇ 3 ಎಸ್ಆರ್ಎಸ್ 2019 ದಿನಾಂಕ::04-06-2019.
7. ಸರ್ಕಾರದ ಅಧಿಕೃತ ಜ್ಞಾಪನ ಸಂ: ಸಿಆಸುಇ 106 ಸೇನೆನಿ 2021 ದಿನಾಂಕ: 10-12-2021.

*****

ಕರ್ನಾಟಕ ಸರ್ಕಾರಿ ನೌಕರರ (ಜೇಷ್ಟತಾ) ನಿಯಮಗಳು, 1957 ರ ನಿಯಮ 10 ರಡಿ ಜೇಷ್ಟತಾ ನಿಯಮಗಳನ್ನು ಅನುಸರಿಸಿ ಪ್ರತಿಯೊಂದು ವೃಂದದ ಜೇಷ್ಟತಾ ಪಟ್ಟಿಯನ್ನು ಪ್ರತಿ ವರ್ಷ ನೇಮಕಾತಿ ಪ್ರಾಧಿಕಾರವು ಸಿದ್ಧಪಡಿಸಬೇಕಾಗಿರುತ್ತದೆ.

ಉಲ್ಲೇಖ (7) ರ ಅಧಿಕೃತ ಜ್ಞಾಪನದಲ್ಲಿ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ನಿಗದಿಪಡಿಸಿರುವ ಅನುಪಾತದನ್ವಯ (**Quota**) ನೇರ ನೇಮಕಾತಿ ಮತ್ತು ಮುಂಬಡ್ತಿಗಾಗಿ ರಿಕ್ತಸ್ಥಾನ ಆಧಾರಿತ ವರ್ಗೀಕರಣ ಮಾಡುವ ಪದ್ಧತಿಯನ್ನು ರದ್ದುಪಡಿಸಿ, ಹುದ್ದೆ ಆಧಾರಿತ ವರ್ಗೀಕರಣ ಅನುಸರಿಸಿ ಭವಿಷ್ಯವರ್ತಿಯಾಗಿ ಭರ್ತಿ ಮಾಡಲು ಹಿಂದಿನ ಮಾರ್ಗಸೂಚಿಯನ್ನು ಮಾರ್ಪಡಿಸಿ, ಪರಿಷ್ಕೃತ ಮಾರ್ಗಸೂಚನೆಗಳನ್ನು ನೀಡಲಾಗಿರುತ್ತದೆ ಹಾಗೂ ಜೇಷ್ಟತಾ ಪಟ್ಟಿ ಸಿದ್ಧಪಡಿಸಲು ಈ ಹಿಂದಿನ ಉಲ್ಲೇಖ (4) ರಿಂದ (6) ರವರೆಗಿನ ಅಧಿಕೃತ ಜ್ಞಾಪನದಲ್ಲಿ ನಿಗದಿಪಡಿಸಲಾದ ನಮೂನೆಗಳನ್ನು ಮಾರ್ಪಡಿಸಿದೆ.

ಉಲ್ಲೇಖ (7) ರ ಸರ್ಕಾರದ ಅಧಿಕೃತ ಜ್ಞಾಪನ ಅನುಬಂಧ-1 ರಲ್ಲಿ ನೇರ ನೇಮಕಾತಿ ಮತ್ತು ಮುಂಬಡ್ತಿ ಎರಡು ವಿಧಾನಗಳಿಂದಲೂ ನೇಮಕಾತಿ ಮಾಡುವುದಕ್ಕೆ ಸಂಬಂಧಿಸಿದಂತೆ ನಮೂನೆಯನ್ನು ಮತ್ತು ಅನುಬಂಧ-2 ರಲ್ಲಿ ನೇರ ನೇಮಕಾತಿ ಅಥವಾ ಮುಂಬಡ್ತಿ ಒಂದೇ ವಿಧಾನದ ಮೂಲಕ ಭರ್ತಿ ಮಾಡುವ ಹುದ್ದೆಗಳಿಗೆ ಸಂಬಂಧಿಸಿದಂತೆ ಜೇಷ್ಠತಾ ಪಟ್ಟಿಯನ್ನು ಸಿದ್ಧಪಡಿಸಲು ನಮೂನೆಯನ್ನು ನಿಗದಿಪಡಿಸಲಾಗಿದೆ.

ಅದರಂತೆ ಪ್ರಸ್ತುತ ಸಮಾಜ ಕಲ್ಯಾಣ ಇಲಾಖೆಯಲ್ಲಿನ ಎಸ್.ಎಸ್.ಎಲ್.ಸಿ ಉತ್ತೀರ್ಣರಾಗಿರುವ ಹಾಗೂ ಲಘು ವಾಹನ ಚಾಲನಾ ಪರವಾನಗಿ ಹೊಂದಿರುವ ಹಿರಿಯ ವೇತನ ಶ್ರೇಣಿ ಹಾಗೂ ಕಿರಿಯ ವೇತನ ಶ್ರೇಣಿ ಹೊಂದಿರುವ ಗ್ರೂಪ್ ಡಿ ವೃಂದದ (ಅಡುಗೆಯವರು, ಅಡುಗೆ ಸಹಾಯಕರು, ಜವಾನರು, ಕಾವಲುಗಾರರು) ನೌಕರರಿಗೆ ಸಂಬಂಧಿಸಿದಂತೆ ಹೈದರಾಬಾದ್-ಕರ್ನಾಟಕ ಸ್ಥಳೀಯ ವೃಂದ ಮತ್ತು ಉಳಿಕೆ ಮೂಲ ವೃಂದದ ಸಂಯೋಜಿತ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಅನುಬಂಧ-2 ರಲ್ಲಿ ದಿನಾಂಕ:31-12-2022 ಕ್ಕೆ ಅಂತ್ಯಗೊಂಡಂತೆ ದಿನಾಂಕ:01-01-2023 ರಲ್ಲಿದ್ದಂತೆ ಸಮಾಜ ಕಲ್ಯಾಣ ಇಲಾಖೆಯ ವೆಬ್‌ಸೈಟ್ **sw.kar.nic.in** ನಲ್ಲಿ ಪ್ರಕಟಿಸಿ, ಆಕ್ಷೇಪಣೆಗಳನ್ನು ಸಲ್ಲಿಸಲು ದಿನಾಂಕ:-02-02-2023 ರವರೆಗೆ ಕಾಲಾವಕಾಶ ನೀಡಲಾಗಿದೆ.

ಜೇಷ್ಠತಾ ಪಟ್ಟಿಯಿಂದ ಬಾಧಿತರಾಗಿರುವ ನೌಕರರು ಸದರಿ ತಾತ್ಕಾಲಿಕ ಜೇಷ್ಠತಾ ಪಟ್ಟಿಯಲ್ಲಿನ ನೌಕರರ ಹೆಸರು, ನೇಮಕಾತಿ ವಿಧಾನ, ಮೀಸಲಾತಿ ವರ್ಗ, ಜನ್ಮ ದಿನಾಂಕ, ಸೇವೆಗೆ ಸೇರಿದ ದಿನಾಂಕ, ಜೇಷ್ಠತೆಗೆ ಪರಿಗಣಿಸಲಾದ ಅರ್ಹತೆ ದಿನಾಂಕ, ಜೇಷ್ಠತೆ ನಿಗದಿಪಡಿಸಿರುವಲ್ಲಿ ವ್ಯತ್ಯಾಸ / ಹೆಸರು ಕೈಬಿಟ್ಟುಹೋಗಿರುವ, ಮುಂಬಡ್ತಿ ಹೊಂದಿರುವ ಕುರಿತು ಲೋಪದೋಷಗಳಿದ್ದಲ್ಲಿ ಸಂಬಂಧಪಟ್ಟ ನೌಕರರು ಆಕ್ಷೇಪಣೆಯನ್ನು ಲಿಖಿತವಾಗಿ ತಮ್ಮ ಕಛೇರಿ ಮುಖ್ಯಸ್ಥರಿಗೆ ಸಲ್ಲಿಸತಕ್ಕದ್ದು. ಸದರಿ ಆಕ್ಷೇಪಣೆಗಳನ್ನು ದೃಢೀಕೃತ ದಾಖಲೆಗಳೊಂದಿಗೆ ಈ ಕಛೇರಿಗೆ ನೊಂದಣಿ ಅಂಚೆ ಮೂಲಕ ಸಂಬಂಧಪಟ್ಟ ಕಛೇರಿ ಮುಖ್ಯಸ್ಥರು ಸಲ್ಲಿಸತಕ್ಕದು. ನಿಗದಿತ ಅವಧಿ ನಂತರ ಸ್ವೀಕೃತವಾಗುವ ಆಕ್ಷೇಪಣೆಗಳನ್ನು ತಿರಸ್ಕರಿಸಲಾಗುವುದು.

09/01.23

ಆಯುಕ್ತರು
ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು

**ಪ್ರತಿಯನ್ನು:-**

1. ಸರ್ಕಾರದ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು.
2. ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯ, ಬೆಂಗಳೂರು.
3. ಕಾರ್ಯದರ್ಶಿಗಳು, ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗ, ಬೆಂಗಳೂರು.
4. ಮುಖ್ಯ ಆಡಳಿತಾಧಿಕಾರಿಗಳು, ಪರೀಕ್ಷಾ ಪೂರ್ವ ತರಬೇತಿ ಕೇಂದ್ರ, ಬೆಂಗಳೂರು .
5. ಎಲ್ಲಾ ಜಿಲ್ಲಾಗಳ ಜಿಲ್ಲಾ ಪಂಚಾಯತ್ ನ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳಿಗೆ.
6. ಎಲ್ಲಾ ಜಿಲ್ಲೆಗಳ ಜಂಟಿ ನಿರ್ದೇಶಕರು / ಉಪ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ.
7. ಎಲ್ಲಾ ಯೋಜನಾ ಸಮನ್ವಯಾಧಿಕಾರಿಗಳು, ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆ.
8. ಎಲ್ಲಾ ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳಿಗೆ.
9. ಎಲ್ಲಾ ತಾಲ್ಲೂಕುಗಳ ಸಹಾಯಕ ನಿರ್ದೇಶಕರು ಗ್ರೇಡ್-1 ಮತ್ತು ಗ್ರೇಡ್-2 ಸಮಾಜ ಕಲ್ಯಾಣ ಇಲಾಖೆ.
10. ಸಂಬಂಧಿಸಿದ ನೌಕರರಿಗೆ ಸಂಬಂಧಿಸಿದ ಮೇಲಾಧಿಕಾರಿಗಳ ಮುಖಾಂತರ.

## ಅನುಬಂಧ-2

### ನೇರ ನೇಮಕಾತಿ ಅಥವಾ ಮುಂಬಡ್ತಿ ಮುಖಾಂತರ ಒಂದೇ ವಿಧಾನದಿಂದ ನೇಮಕಾತಿ ಮಾಡುವ ವೃಂದಗಳಿಗೆ

ದಿನಾಂಕ: 01-01-2023 ರಲ್ಲಿದ್ದಂತೆ ಸಮಾಜ ಕಲ್ಯಾಣ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಹಿರಿಯ ವೇತನ ಶ್ರೇಣಿ (18600-32600) ಅಡುಗೆಯವರು ಹಾಗೂ ಕಿರಿಯ ವೇತನ ಶ್ರೇಣಿ (17000-28950) ಅಡುಗೆ ಸಹಾಯಕರು, ಕಾವಲುಗಾರರು ಮತ್ತು ಜವಾನರು ಹುದ್ದೆಯಲ್ಲಿ ಎಸ್.ಎಸ್.ಎಲ್.ಸಿ ಉತ್ತೀರ್ಣರಾದ ಹಾಗೂ ಲಘು ವಾಹನ ಚಾಲನ ಪರವಾನಗಿ ಹೊಂದಿರುವ ಹೈದ್ರಾಬಾದ್ - ಕರ್ನಾಟಕ ಸ್ಥಳೀಯ ವೃಂದ ಹಾಗೂ ಉಳಿಕೆ ಮೂಲ ವೃಂದದ ನೌಕರರ ಸಂಯೋಜಿತ ತಾತ್ಕಾಲಿಕ ಜೇಷ್ಟತಾ ಪಟ್ಟಿ

| | |
|---|---|
| 1) ಇಲಾಖೆ: | ಸಮಾಜ ಕಲ್ಯಾಣ ಇಲಾಖೆ |
| 2) ವೃಂದದ ಹೆಸರು: | ಹಿರಿಯ ವೇತನಶ್ರೇಣಿ (ಅಡುಗೆಯವರು), ಕಿರಿಯ ವೇತನಶ್ರೇಣಿ (ಅಡುಗೆ ಸಹಾಯಕರು, ಕಾವಲುಗಾರರು ಮತ್ತು ಜವಾನರು) |
| 3) ವೃಂದದಲ್ಲಿನ ಒಟ್ಟು ಹುದ್ದೆಗಳ ಸಂಖ್ಯೆ (ಶಾಶ್ವತ ಮತ್ತು ತಾತ್ಕಾಲಿಕ ಹುದ್ದೆಗಳೆರಡೂ ಒಳಗೊಂಡಂತೆ: | 04 + 54 = 58 |
| 4) ನೇಮಕಾತಿ ನಿಯಮಗಳ ಅನುಸಾರ ನೇಮಕಾತಿ ವಿಧಾನ | ಮುಂಬಡ್ತಿ-ಅಡುಗೆಯವರು, ನೇರ ನೇಮಕಾತಿ-ಅಡುಗೆ ಸಹಾಯಕರು, ಕಾವಲುಗಾರರು ಮತ್ತು ಜವಾನರು |

| ಹಿರಿಯ ವೇತನ ಶ್ರೇಣಿ (18,600-32,600) (ಅಡುಗೆಯವರು) ಸಂಯೋಜಿತ **ತಾತ್ಕಾಲಿಕ** ಜೇಷ್ಠತಾ ಪಟ್ಟಿ ( ಹೈದ್ರಾಬಾದ್ - ಕರ್ನಾಟಕ ಸ್ಥಳೀಯ ವೃಂದ) | | | | | | | | | | | | |
|---|---|---|---|---|---|---|---|---|---|---|---|---|
| | | | | | | | ಸಂ:ಸಕನಿ/ಸಿಬ್ಬಂದಿ-11/ಸಿಆರ್/68/22-23 ದಿನಾಂಕ: / / 2023 | | | | | |
| ಕ್ರಸಂ | ನೌಕರರ ಹೆಸರು ಶ್ರೀ/ಶ್ರೀಮತಿ | ಹುದ್ದೆ | ನೌಕರರು ಕಾರ್ಯನಿರ್ವಹಿಸುತ್ತಿರುವ ಸ್ಥಳ (ಲಭ್ಯವಿರುವ ಮಾಹಿತಿಯನ್ವಯ) | ಮೀಸಲಾತಿ ವರ್ಗ | ನೇರ ನೇಮಕಾತಿ /ಮುಂಬಡ್ತಿ | | ಜನ್ಮ ದಿನಾಂಕ (ಎಸ್.ಎಸ್.ಎಲ್.ಸಿ ಅಂಕಪಟ್ಟಿಯಲ್ಲಿ ರುವಂತೆ) | ನೇಮಕಾತಿ ಆದೇಶ / ಸೇವೆಗೆ ಸೇರಿದ ದಿನಾಂಕ: | ವಾಸ್ತವವಾಗಿ ನೇರ ನೇಮಕಾತಿ/ ಮುಂಬಡ್ತಿ ಹೊಂದಿದ ದಿನಾಂಕ | ಜೇಷ್ಠತೆಗೆ ಅರ್ಹತಾ ದಿನಾಂಕ | ಎಸ್.ಎಸ್.ಎಲ್.ಸಿ ಉತ್ತೀರ್ಣರಾದ ವರ್ಷ, ನೈಜತಾ ವರದಿ | ಲಘು ವಾಹನಾ ಚಾಲನಾ ಪರವಾನಗಿ |
| | | | | | ನೇರ ನೇಮಕಾತಿ | ಮುಂಬಡ್ತಿ | | | | | | |
| 1 | 2 | 3 | 4 | 5 | 6 | | 7 | 8 | 10 | 11 | | 12 |
| ಹಿರಿಯ ವೇತನಶ್ರೇಣಿ ಅಡುಗೆಯವರ ಹುದ್ದೆಯಲ್ಲಿ ಎಸ್.ಎಸ್.ಎಲ್.ಸಿ ಉತ್ತೀರ್ಣರಾದ ಹಾಗೂ ಲಘು ವಾಹನ ಚಾಲನ ಪರವಾನಗಿ ಹೊಂದಿರುವ ನೌಕರರು ಯಾರೂ ಇರುವುದಿಲ್ಲ. | | | | | | | | | | | | |
| | | | | | | | | | | | | |